# ಕನ್ನಡ ಭಾಷಾ ಪರೀಕ್ಷೆ–2015

| ದಿನಾಂಕ | ವಿಷಯ | ಸಮಯ |
|---|---|---|
| **13–5–2015** | **ಕನ್ನಡ ಭಾಷೆ** | **ಸಂ. 4.45 ರಿಂದ 5.45 ರವರೆಗೆ** |
| ಗರಿಷ್ಠ ಅಂಕಗಳು | ಒಟ್ಟು ಅವಧಿ | ಉತ್ತರಿಸಲು ಇರುವ ಗರಿಷ್ಠ ಅವಧಿ |
| **50** | **70 ನಿಮಿಷಗಳು** | **60 ನಿಮಿಷಗಳು** |

| ನಿಮ್ಮ ಸಿಇಟಿ (CET) ಸಂಖ್ಯೆಯನ್ನು ಬರೆಯಿರಿ | | | | | | ವರ್ಷನ್ ಕೋಡ್ | ಪ್ರಶ್ನೆಪತ್ರಿಕೆಯ ಕ್ರಮ ಸಂಖ್ಯೆ |
|---|---|---|---|---|---|---|---|
| | | | | | | | |

| ಜನನ ದಿನಾಂಕ | | | | | | | |
|---|---|---|---|---|---|---|---|
| | | | | | | | |

## ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು

1. ಅಭ್ಯರ್ಥಿಗಳು ನೋಂದಣಿ ಸಂಖ್ಯೆಯನ್ನು ಈ ಉತ್ತರಪತ್ರಿಕೆಯಲ್ಲಿ ಬರೆದಿದ್ದೀರೆಂದು ಖಾತ್ರಿ ಪಡಿಸಿಕೊಳ್ಳಿ.
2. ಪ್ರತಿ ಪ್ರಶ್ನೆಯ ಕೆಳಭಾಗದಲ್ಲಿ ಅಭ್ಯರ್ಥಿಗಳು ಉತ್ತರಿಸಬೇಕಾಗಿರುವುದರಿಂದ ಈ ಪತ್ರಿಕೆಯು, ಪ್ರಶ್ನೆಪತ್ರಿಕೆ ಮತ್ತು ಉತ್ತರಪತ್ರಿಕೆಗಳನ್ನು ಒಳಗೊಂಡಿರುತ್ತದೆ.
3. ದಯವಿಟ್ಟು ಬಾಲ್ ಪಾಯಿಂಟ್ ಪೆನ್ನನ್ನೇ ಉಪಯೋಗಿಸಿ ಸ್ಪಷ್ಟವಾಗಿ ಉತ್ತರ ಬರೆಯಿರಿ.
4. ಈ ಪ್ರಶ್ನೆಪತ್ರಿಕೆಯನ್ನೊಳಗೊಂಡ ಉತ್ತರ ಪತ್ರಿಕೆಯನ್ನು ನಿಮಗೆ 2ನೇ ಬೆಲ್ ಅಂದರೆ ಸಂ. 4.40 ಆದ ನಂತರ ಕೊಡಲಾಗುವುದು.
5. ಮೂರನೇ ಬೆಲ್ ಸಂ. 4.45ಕ್ಕೆ ಆಗುತ್ತದೆ. ಅಲ್ಲಿಯವರೆಗೂ,
   - ಪ್ರಶ್ನೆಪತ್ರಿಕೆಯ ಬಲಭಾಗದಲ್ಲಿರುವ ಪಿನ್ ಅನ್ನು ತೆಗೆಯಬಾರದು.
   - ಪ್ರಶ್ನೆಪತ್ರಿಕೆಯ ಒಳಗಡೆ ಇರುವ ಪ್ರಶ್ನೆಗಳನ್ನು ನೋಡಲು ಪ್ರಯತ್ನಿಸಬಾರದು.
   - ಈ ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸಬಾರದು.
6. ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು 10 ಮುಖ್ಯ ಪ್ರಶ್ನೆಗಳಿರುತ್ತದೆ.
7. ಕೊನೆಯ ಬೆಲ್ ಅಂದರೆ ಸಂ. 5.45 ಆದ ನಂತರ ಉತ್ತರಿಸುವುದನ್ನು ನಿಲ್ಲಿಸಿ, ನಿಮ್ಮ ಎಡಗೈ ಹೆಬ್ಬೆರಳ ಗುರುತನ್ನು ನಿಗದಿತ ಜಾಗದಲ್ಲಿ ಹಾಕಿ.
8. ಈ ಪ್ರಶ್ನೆಪತ್ರಿಕೆ ಮತ್ತು ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಯಥಾಸ್ಥಿತಿಯಲ್ಲಿ ನೀಡಿರಿ.
9. ಈ ಉತ್ತರ ಪತ್ರಿಕೆಯ ಕೆಳಭಾಗದ ನಿಗಧಿತ ಜಾಗದಲ್ಲಿ ಅಭ್ಯರ್ಥಿಯು ಸಹಿ ಮಾಡಬೇಕು.

**SEAL**

| ಅಭ್ಯರ್ಥಿಯ ಸಹಿ<br>ದಿನಾಂಕ | ಅಭ್ಯರ್ಥಿಯ ಎಡಗೈ<br>ಹೆಬ್ಬೆರಳ ಗುರುತು | ಕೊಠಡಿ ಮೇಲ್ವಿಚಾರಕರ ಸಹಿ |
|---|---|---|

I. ಕೆಳಗಿನ ಪದಗಳಲ್ಲಿ ಯಾವುದಾದರೂ **ಐದು (5)** ಪದಗಳಿಗೆ ಇಂಗ್ಲೀಷಿನಲ್ಲಿ ಸಮಾನಾಂತರ ಪದಗಳನ್ನು ಬರೆಯಿರಿ : 5 × 1 = 5

1. ಗ್ರಹ ______________________
2. ಸರೋವರ ______________________
3. ತಾಯಿ ______________________
4. ಸೂರ್ಯ ______________________
5. ಹುಲಿ ______________________
6. ಪುಸ್ತಕ ______________________
7. ಶಿಕ್ಷಕಿ ______________________
8. ರಾತ್ರಿ ______________________

II. ಕೆಳಗಿನ ಪದಗಳಲ್ಲಿ ಯಾವುದಾದರೂ **ಐದು (5)** ಪದಗಳಿಗೆ ಕನ್ನಡದಲ್ಲಿ ಸಮಾನಾಂತರ ಪದಗಳನ್ನು ಬರೆಯಿರಿ : 5 × 1 = 5

1. Nurse ______________________
2. Peace ______________________
3. Park ______________________
4. Dream ______________________
5. Mind ______________________
6. Soldier ______________________
7. Nonviolence ______________________
8. Queen ______________________

III. ಐದು (5) ಪದಗಳನ್ನು ಮಾತ್ರ ತಪ್ಪಿದ್ದರೆ ತಿದ್ದಿ ಬರೆಯಿರಿ : 5 × 1 = 5

1. ಜವನ ____________________
2. ದೇಶಬಕ್ತಿ ____________________
3. ಎಳ್ಳುಬೆಲ ____________________
4. ರಾಜೋತ್ಸವ ____________________
5. ಪಪಂಚ ____________________
6. ಪ್ರಾಥನೆ ____________________
7. ಬಾರತ ____________________
8. ಸಿರಿಗನಡ ____________________

IV. ಐದನ್ನು (5) ಕನ್ನಡಕ್ಕೆ ಅನುವಾದಿಸಿ : 5 × 1 = 5

1. Face is the Index of the mind.

____________________________________________

____________________________________________

2. Indhira Gandhi was the first women Prime Minister of India.

____________________________________________

____________________________________________

3. Do or Die.

____________________________________________

____________________________________________

4. Tiger is the National Animal of India.

5. Books are our best friends.

6. India is the 7[th] largest country in the world.

7. An idle mind is a devil's workshop.

V. ಈ ಕೆಳಗಿನ ವಾಕ್ಯಗಳಲ್ಲಿ **ಐದನ್ನು (5)** ಮಾತ್ರ ತಪ್ಪಿದ್ದರೆ ತಿದ್ದಿ ಬರೆಯಿರಿ : 5 × 1 = 5

1. ಭಾರತಿ ಶಾಲೆಗೆ ಹೋದನು.

2. ಹಾಕಿ ಒಳಾಂಗಣ ಆಟ.

3. ನಾನು ನಾಡನ್ನು ಗೌರವಿಸುತ್ತೇವೆ.

______________________________

______________________________

4. ಹೂವಾಡಗಿತ್ತಿ ಹೂವನ್ನು ಮಾರುತ್ತಾನೆ.

______________________________

______________________________

5. ದಯವೇ ಅಧರ್ಮದ ಮೂಲವಯ್ಯ.

______________________________

______________________________

6. ಕೈ ಕೆಸರಾದರೆ ಕಾಲು ಮೊಸರು.

______________________________

______________________________

7. ಒಂದು ತಿಂಗಳಿಗೆ 7 ದಿನಗಳು.

______________________________

______________________________

VI. ಯಾವುದಾದರೂ **ಐದು (5)** ಪ್ರಶ್ನೆಗಳಿಗೆ ಒಂದು ಪದ / ಒಂದು ವಾಕ್ಯದಲ್ಲಿ ಉತ್ತರಿಸಿ : 5 × 1 = 5

1. ಸ್ವಾತಂತ್ರ್ಯ ದಿನಾಚರಣೆಯನ್ನು ಯಾವಾಗ ಆಚರಿಸುತ್ತಾರೆ?

______________________________

______________________________

2. ಕನ್ನಡದ ಮೊದಲ ಕವಯಿತ್ರಿ ಯಾರು?

3. ಭಾರತದ ಸಂವಿಧಾನದ ಶಿಲ್ಪಿ ಯಾರು?

4. 'ವಂದೇ ಮಾತರಂ' ಗೀತೆಯನ್ನು ಬರೆದವರು ಯಾರು?

5. ಭಾರತದ 'ರಾಷ್ಟ್ರಪಿತ' ಎಂದು ಯಾರನ್ನು ಕರೆಯಲಾಗುತ್ತದೆ?

6. ವಿಶ್ವ ಮಹಿಳಾ ದಿನಾಚರಣೆಯನ್ನು ಎಂದು ಆಚರಿಸಲಾಗುತ್ತದೆ?

7. ಕನ್ನಡ ಭಾಷೆಗೆ ದೊರೆತ ಜ್ಞಾನಪೀಠಪ್ರಶಸ್ತಿಗಳು ಎಷ್ಟು?

VII. ಕೆಳಗಿನ ಯಾವುದಾದರೂ **ಒಂದು** ವಿಷಯದಲ್ಲಿ **ಐದು (5)** ವಾಕ್ಯಗಳ ಪುಟ್ಟ ಪ್ರಬಂಧ ಬರೆಯಿರಿ : 1 × 5 = 5

1. ರಾಷ್ಟ್ರಗೀತೆ.
2. ನನ್ನ ನೆಚ್ಚಿನ ಕ್ರೀಡೆ.
3. ಸಮಯಪ್ರಜ್ಞೆ.
4. ವಾರಪತ್ರಿಕೆ.
5. ಭೂಕಂಪ.

________________________________________

________________________________________

________________________________________

________________________________________

________________________________________

________________________________________

________________________________________

________________________________________

VIII. ಮಾದರಿಯಲ್ಲಿ ಸೂಚಿಸಿದಂತೆ **ಐದು (5)** ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ : 5 × 1 = 5

<u>ಮಾದರಿ:</u> ಸತ್ಯ × ಅಸತ್ಯ

1. ಗೌರವ × ____________________
2. ಉತ್ಸಾಹ × ____________________
3. ಉಳಿವು × ____________________
4. ಸೂರ್ಯೋದಯ × ____________________
5. ಆರೋಗ್ಯ × ____________________

IX. ಗುಂಪಿಗೆ ಸೇರದ ಪದ ಬರೆಯಿರಿ : 5 × 1 = 5

1. ಶೂರ, ವೀರ, ಸದ್ಗುಣ, ಪರಾಕ್ರಮ.

______________________

2. ಸಿಂಹ, ತೋಳ, ಹುಲಿ, ಜಿಂಕೆ.

______________________

3. ಆನಂದ, ಹಿಗ್ಗು, ಕುಗ್ಗು, ಖುಷಿ.

______________________

4. ನದಿ, ಹೊಳೆ, ತೊರೆ, ಸರೋವರ.

______________________

5. ಗಂಡು, ವರ, ಹೆಣ್ಣು, ಮಧುವಣಿಗ.

______________________

X. ಈ ಪಠ್ಯಭಾಗವನ್ನು ಓದಿಕೊಂಡು ಈ ಕೆಳಗಿನ **ಐದು (5)** ಪ್ರಶ್ನೆಗಳಿಗೆ ಉತ್ತರಿಸಿ : 5 × 1 = 5

ಮಾವಿನ ಹಣ್ಣು ಏನು ಪರಿಮಳ! ಏನು ಬಣ್ಣ! ಬಾಯಲ್ಲಿ ನೀರೂರುವುದು. ರಸ ತುಂಬಿದ ಹಣ್ಣನ್ನು ಚೀಪುತ್ತಾ ಹೋದರೆ ಏನು ಸಿಹಿ! ಎಂಥ ಆನಂದ! ಅಬ್ಬಬ್ಬಾ! ಇದನ್ನು ಎಲ್ಲರೂ ಪ್ರೀತಿಸುವರು. ಆದುದರಿಂದ ಇದು ಹಣ್ಣುಗಳ ರಾಜ.

ಮಾವಿನ ತೋಪುಗಳು ಪ್ರಕೃತಿಯ ಚೆಲುವನ್ನು ಹೆಚ್ಚಿಸುತ್ತವೆ. ತೋಪು ಅಂದರೆ ಹತ್ತಾರು ಮರಗಳ ಗುಂಪು. ಅದರ ನೆರಳು ಬಹಳ ತಂಪು. ದಾರಿಹೋಕರು ಅಲ್ಲಿ ನಿಂತು ಹಣಿವಾರಿಸಿಕೊಳ್ಳುವರು. ದನಗಾಹಿಗಳು ಕೊಳಲೂದುತ್ತ ದನ ಮೇಯಿಸುವರು.

ಮಾವಿನ ಚಿಗುರಿನ ಕಂಪು, ಕೋಗಿಲೆ ಗಾನದ ಇಂಪು, ಚೈತ್ರಮಾಸದ ಸೂಚನೆ ನೀಡುತ್ತದೆ. ಮರದ ತಳಿರು ಹಸಿರು ಬೆರೆತ ಬಂಗಾರದ ಬಣ್ಣ ತಳೆಯುತ್ತದೆ. ಹೂ ತುಂಬಿದ ಗೊನೆ, ಮಿಡಿಗಾಯಿಗಳು ಕಣ್ಣಿಗೆ ಹಬ್ಬ.

ಮಾವಿನ ಹಣ್ಣುಗಳಲ್ಲಿ ಹಲವು ಬಗೆಗಳಿವೆ. ಅವು ರಸಪುರಿ, ನೀಲಂ, ತೋತಾಪುರಿ, ಮಲಗೋವಾ, ಜೀರಿಗೆಮಾವು ಮೊದಲಾದವು. ಮಾವು ಆರೋಗ್ಯಕ್ಕೆ ಒಳ್ಳೆಯದು. ಮಾವಿನ ಕಾಯಿಗೆ ಹುಣಸೆಯ ಹುಳಿಯಿಲ್ಲ. ನಿಂಬೆಯ ಕಟುವೂ ಇಲ್ಲ. ಅದು ಒಗರು ತುಂಬಿದ ಹುಳಿ. ಇದರಿಂದ ಉಪ್ಪಿನಕಾಯಿ ಹಾಕುತ್ತಾರೆ. ಕುದಿಸಿ ಗೊಜ್ಜು ಮಾಡುತ್ತಾರೆ. ರುಬ್ಬಿ ಚಟ್ನಿ ಮತ್ತು ತೊಕ್ಕು ಮಾಡುತ್ತಾರೆ.

ಹಬ್ಬ ಹರಿದಿನಗಳಲ್ಲಿ ಮಾವಿನ ತಳಿರು ತೋರಣ ಕಟ್ಟುತ್ತಾರೆ. ಮರದ ಕಾಂಡದಿಂದ ದೋಣಿ ತಯಾರಿಸುತ್ತಾರೆ. ಈ ಮರವನ್ನು ಮನೆ ಕಟ್ಟಲು ಬಳಸುತ್ತಾರೆ. ಹೀಗೆ ಮಾವು ಎಲ್ಲರಿಗೂ ಹಿತಕಾರಿ.

1. ಹಣ್ಣುಗಳ ರಾಜ ಯಾವುದು?

______________________________________________

______________________________________________

2. ತೋಪು ಎಂದರೇನು?

______________________________________________

______________________________________________

3. ಮಾವಿನ ಚಿಗುರು ಯಾವ ಮಾಸದ ಸೂಚನೆ ನೀಡುತ್ತದೆ?

______________________________________________

______________________________________________

4. ಮಾವಿನ ಕಾಯಿಯನ್ನು ಕುದಿಸಿ ಏನು ಮಾಡುತ್ತಾರೆ?

______________________________________________

______________________________________________

5. ಮಾವಿನ ಮರದ ಕಾಂಡದಿಂದ ಏನನ್ನು ತಯಾರಿಸುತ್ತಾರೆ?

______________________________________________

______________________________________________

*****